## ಹಸುಗಳ ದಿನಾಚರಣೆಯಲ್ಲಿ ದೇಸಿ ಹಸುಗಳೊಂದಿಗೆ ಸೆಲ್ಫಿ

# ಗೋಪಾಲ್ಸ್ ತಂಡದಿಂದ ವಿಭಿನ್ನವಾಗಿ ಹಸುಗಳ ದಿನಾಚರಣೆ

**ಸಂ.ಕ ಸಮಾಚಾರ ಮಾಲೂರು**

ರಾಷ್ಟ್ರೀಯ ಹಸುಗಳ ದಿನಾಚರಣೆಯನ್ನು ವಿಭಿನ್ನವಾಗಿ ಇಲ್ಲಿನ ಗೋಪಾಲ್ಸ್ ತಂಡದಿಂದ ಗಂಗಾಪುರದ ಶ್ರೀ ರಾಮಚಂದ್ರಪುರ ಮಠದ ಗೋ ಆಶ್ರಮದಲ್ಲಿ ಆಚರಿಸಲಾಯಿತು.

ಇದೇ ವೇಳೆ ಮಲ್ಲಿನಾಥ ಹೇಮಡಿಯವರ ಮರಗಿಡಗಳ ಆಹಾರ ಔಷಧ ಎಂಬ ಪುಸ್ತಕದ 4ನೇ ಆವೃತ್ತಿ ಬಿಡುಗಡೆ ನಡೆಯಿತು.

ಮುಂಜಾನೆ ಕೊಟ್ಟಿಗೆ ಸ್ವಚ್ಛಗೊಳಿಸುವುದರಿಂದ ಕಾರ್ಯಕ್ರಮ ಆರಂಭಗೊಂಡಿತು. ಸ್ವಯಂ ಸೇವಕರು ಸಗಣಿ, ಗಂಜಲ ಮುಟ್ಟುವ ಮೂಲಕ ಗೋಶಾಲೆಯನ್ನು ಸ್ವಚ್ಛ ಮಾಡಿದರು.

ಹಿರಿಯ ಗೋಪಾಲಕ ಕುಮಾರ ಸುಬ್ರಮಣ್ಯ ಜಹಗೀರ್‌ದಾರ್ ದೇಸಿ ಹಸುವಿನ ಮಹತ್ವ ತಿಳಿಸಿದರು. ನಂತರ ಹಸುಗಳ ಮೈಸವರುವಿಕೆ ಮತ್ತು ಕರುಗಳೊಂದಿಗೆ ಸೆಲ್ಫಿ ಎಂಬ ವಿಶಿಷ್ಟ ಕಾರ್ಯಕ್ರಮ ಗಮನ ಸೆಳೆಯಿತು.



ಸಂದೀಪ್ ಮಂಜನಾಥ್ ಗೋಶಾಲೆ ಆವರಣದಲ್ಲಿ ದೊರೆತ 30ಕ್ಕೂ ಹೆಚ್ಚು ಬಗೆಯ ಕಳೆ ಸಸ್ಯಗಳ ಔಷಧೀಯ ಗುಣಗಳನ್ನು ಮತ್ತು ಅವುಗಳನ್ನು ಅಡುಗೆಯಲ್ಲಿ ಬಳಸುವ ವಿಧಾನವನ್ನು ವಿವರಿಸಿದರು. ಮಕ್ಕಳಿಗೆ ದೇಸಿ ಹಸುಗಳ ಕುರಿತಾದ ಚಿತ್ರಕಲೆ ಸ್ಪರ್ಧೆ ಮತ್ತು ವಯಸ್ಕರಿಗೆ ರಸಪ್ರಶ್ನೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ರೈಡ್ ಫಾರ್ ಎ ಕಾಸ್ ಸಂಸ್ಥೆಯವರು ಗೋಡೆಯ ಮೇಲೆ ಗೋವಿನ ಕುರಿತಾದ ಚಿತ್ರಗಳನ್ನು ಬಿಡಿಸಿದರು.

ಸುರಭಿ ಗೋಶಾಲೆಯ ಮಧುಸೂಧನ್ ದಂಪತಿ ಸಗಣಿಯಿಂದ ಗಣೇಶ, ದೀಪ ಸೇರಿದಂತೆ ಹಲವು ಉತ್ಪನ್ನಗಳನ್ನು ಪ್ರಾತ್ಯಕ್ಷಿಕೆ ಮೂಲಕ ತೋರಿಸಿದರು. ಚೆನ್ನೈನ ಪ್ರೀತಾ ತಮ್ಮ ಮನೆಯ ಕಾರ್ ಶೆಡ್ ಒಳಗೆ ದೇಸಿ ಹಸು ಸಾಕಿ ಸಗಣಿ ಗಂಜಲದಿಂದ 40ಕ್ಕೂ ಹೆಚ್ಚು ಉತ್ಪನ್ನಗಳನ್ನು ತಯಾರಿಸುವ ಅನುಭವ ಹಂಚಿಕೊಂಡರು.

ಗೋಪಾಲ್ಸ್ ತಂಡದ ಸಂಸ್ಥಾಪಕ ರಾಮಸುಬ್ರಮಣ್ಯಂ ಭಾಗವಹಿಸಿದ ಪ್ರತಿಯೊಬ್ಬರಿಗೂ ಅಮೃತಬಳ್ಳಿ ಮತ್ತು ಗೋಮಯ ಕೀಚೈನ್ ಉಡುಗೊರೆ ನೀಡಿದರು.

ಶ್ರೀರಾಘವೇಂದ್ರ ಗೋಆಶ್ರಮದ ವ್ಯವಸ್ಥಾಪಕ ರಾಮಚಂದ್ರ, ಅಜ್ಜಕಾನ, ಸಮಿತಿ ಕಾರ್ಯದರ್ಶಿ ಶ್ರೀಕಾಂತ ಹೆಗಡೆ, ಉಪಾಧ್ಯಕ್ಷ ರಾಮಕೃಷ್ಣರಾವ್ ಇದ್ದರು.

ಸಂಯುಕ್ತ ಕರ್ನಾಟಕ Sat, 16 July 2022
epaper.samyukthakarnataka.com/c/69196346

National Cow’s Day ,July 10 2022,Sri Raghavendra Gou Ashram ,Bangalore in many news papers across karnataka